**ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿ:25.06.2019 ರಂದು ಮಧ್ಯಾಹ್ನ 04.00 ಗಂಟೆಗೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು**

**ಸಭೆಯಲ್ಲಿ ಹಾಜರಿದ್ದವರು:-**

1. ಶ್ರೀ.ಎನ್.ಸಿ.ಶ್ರೀನಿವಾಸ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು
2. ಶ್ರೀ.ಎನ್.ಪಿ.ರಮೇಶ್, ರಾಜ್ಯ ಮಾಹಿತಿ ಆಯುಕ್ತರು
3. ಶ್ರೀ.ಎಸ್.ಎಲ್.ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು
4. ಶ್ರೀ.ಹೆಚ್.ಪಿ.ಸುದಾಮ ದಾಸ್, ರಾಜ್ಯ ಮಾಹಿತಿ ಆಯುಕ್ತರು
5. ಡಾ.ಕೆ.ಇ.ಕುಮಾರಸ್ವಾಮಿ, ರಾಜ್ಯ ಮಾಹಿತಿ ಆಯುಕ್ತರು
6. ಡಾ.ಲಿಂಗರಾಜ್ ಕೆ, ರಾಜ್ಯ ಮಾಹಿತಿ ಆಯುಕ್ತರು
7. ಶ್ರೀ. ಎಸ್.ಎಂ.ಸೋಮಶೇಖರ್, ರಾಜ್ಯ ಮಾಹಿತಿ ಆಯುಕ್ತರು
8. ಶ್ರೀ.ಕೆ.ಪಿ.ಮಂಜುನಾಥ, ರಾಜ್ಯ ಮಾಹಿತಿ ಆಯುಕ್ತರು
9. ಶ್ರೀಮತಿ.ಎಸ್.ಹೊನ್ನಾಂಬ, ಕಾರ್ಯದರ್ಶಿಗಳು

ಸಭೆಯ ಪ್ರಾರಂಭದಲ್ಲಿ ಕರ್ನಾಟಕ ಮಾಹಿತಿ ಆಯೋಗದ ಕಾರ್ಯದರ್ಶಿಗಳಾದ ಶ್ರೀಮತಿ ಎಸ್. ಹೊನ್ನಾಂಬ ರವರು ಸಭೆಯಲ್ಲಿ ಉಪಸ್ಥಿತರಿದ್ದ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರನ್ನು ಹಾಗೂ ಇತರೆ ರಾಜ್ಯ ಮಾಹಿತಿ ಆಯುಕ್ತರುಗಳನ್ನು ಸಭೆಗೆ ಸ್ವಾಗತಿಸಿದ ನಂತರ ಸಭೆಯು ಪ್ರಾರಂಭವಾಯಿತು.

**ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:**

1) **ಕರ್ನಾಟಕ ಮಾಹಿತಿ ಆಯೋಗದ ಎಲ್ಲಾ ನ್ಯಾಯಾಲಯಗಳಲ್ಲಿ ಸಾಮಾನ್ಯ ಕಾರ್ಯ ವಿಧಾನ (common procedure) ಅನುಸರಿಸುವ ಬಗ್ಗೆ:-**

ಕರ್ನಾಟಕ ಮಾಹಿತಿ ಆಯೋಗದ ಎಲ್ಲಾ ನ್ಯಾಯಾಲಯಗಳಲ್ಲಿ ನಡೆಯುವ ದ್ವಿತೀಯ ಮೇಲ್ಮನವಿ ಪ್ರಕರಣಗಳ ನಡಾವಳಿಗಳ ಕಾಲಕ್ಕೆ ಎಲ್ಲಾ ನ್ಯಾಯಾಲಯಗಳಲ್ಲಿ ಏಕ ರೂಪದ ಕಾರ್ಯವಿಧಾನಗಳನ್ನು ಅನುಸರಿಸುವ ಅವಶ್ಯಕತೆ ಇದೆ ಎಂದು ಸರ್ವಾನುಮತದಿಂದ ಅಭಿಪ್ರಾಯ ಪಡಲಾಯಿತು. ಇದುವರೆಗೂ ದ್ವಿತೀಯ ಮೇಲ್ಮನವಿ ಪ್ರಕರಣಗಳ ವಿಚಾರಣೆ ಕಾಲಕ್ಕೆ ನಡೆಸಲಾಗುವ ಪ್ರತಿನಿತ್ಯದ ನಡಾವಳಿಗಳ ಒಂದು ಪ್ರತಿಯನ್ನು ಮೇಲ್ಮನವಿದಾರರಿಗೆ ಹಾಗೂ ಎದುರಾಳಿಗಳಿಗೆ ಪ್ರತಿಬಾರಿಯೂ ಕಳುಹಿಸುವ ಪದ್ಧತಿಯನ್ನು ಪ್ರಸ್ತುತ ಎಲ್ಲಾ ನ್ಯಾಯಾಲಯಗಳಲ್ಲಿಯೂ ಪಾಲಿಸಲಾಗುತ್ತಿದೆ. ಇದರಿಂದ ಆಯೋಗದ ಕಛೇರಿಯ ಮೇಲೆ ಅತ್ಯಂತ ಹೆಚ್ಚಿನ ಕಾರ್ಯ ಒತ್ತಡ ಉಂಟಾಗುತ್ತಿರುತ್ತದೆ. ಇದರಿಂದ ದ್ವಿತೀಯ ಮೇಲ್ಮನವಿಗಳ ತೀರ್ಮಾನ ವಿಳಂಭವಾಗುತ್ತಿದೆ. ಅಲ್ಲದೆ, ಕಾನೂನು ರೀತ್ಯ ಮೇಲ್ಮನವಿಗಳನ್ನು ಸಲ್ಲಿಸಿದಾಗ ಉಭಯಪಕ್ಷಕಾರರಿಗೂ ಸದರಿ ಪ್ರಕರಣದಲ್ಲಿ ಗೊತ್ತುಪಡಿಸಲಾದ ತಾರೀಖಿನಂದು ಹಾಜರಾಗುವಂತೆ ಪ್ರಥಮ ನೋಟಿಸ್‌ನ್ನು ಕಳುಹಿಸಬೇಕಾಗಿರುತ್ತದೆ. ಅಲ್ಲದೆ ಮಾಹಿತಿ ಹಕ್ಕು ಅಧಿನಿಯಮ, 2005ರ ಕಲಂ 19(9)ರ ರೀತ್ಯ ಸದರಿ ಮೇಲ್ಮನವಿಯಲ್ಲಿ ಮಾಡುವ ಅಂತಿಮ ತೀರ್ಪ (Decision) ನ್ನು ಉಭಯಪಕ್ಷಕಾರರಿಗೂ ಕಳುಹಿಸುವ ಅವಶ್ಯಕತೆ ಇರುತ್ತದೆ. ಈ ರೀತಿಯಲ್ಲಿ